ಚೀನಾದ ಹುಯೆನ್‌ತ್ಸಾಂಗ್ ತನ್ನ ಪ್ರವಾಸ ಕಥನದಲ್ಲಿ ಕುರುಕ್ಷೇತ್ರ ಯುದ್ಧರಂಗ ಸಂಬಂಧ ನೀಡಿರುವ ಒಂದು ವಿವರಣೆ ಹೀಗಿದೆ: ಇಂಡಿಯಾ ದೇಶವು ಇಬ್ಬರು ರಾಜರಿಗೆ ಸೇರಿತ್ತು. ಒಬ್ಬನ ರಾಜ್ಯವನ್ನು ಇನ್ನೊಬ್ಬನು ಕಬಳಿಸಬೇಕೆಂಬ ಮೋಹದಿಂದ ಪರಸ್ಪರ ಕಾದಾಡುತ್ತಲೇ ಇದ್ದರು. ಇವರ ನಿರಂತರ ಕಲಹದಿಂದ ನಿತ್ರಾಣರಾದ ಸೈನಿಕರು, ಜನ ತಿರುಗಿಬಿದ್ದರು. ಈ ಕಾರಣ ಒಬ್ಬ ರಾಜನು ಒಂದು ಉಪಾಯ ಹೂಡಿದ. ಜನಗಳಿಗೆ ಹೇಗೂ ಅಲೌಕಿಕ ವಿಚಾರಗಳಲ್ಲಿ ಹುಚ್ಚು ನಂಬಿಕೆ ಇದೆ ಎಂಬುದನ್ನರಿತ ರಾಜನು ಒಬ್ಬ ಧಾರ್ಮಿಕ ಗುರುವನ್ನು ಕರೆಸಿ, ಯುದ್ಧ ಸಂಬಂಧಿ ಆರಾಧನೆಯ ಗ್ರಂಥವನ್ನು ಬರೆಸಿ ಗುಡ್ಡಬೆಟ್ಟದ ಗುಹೆಯೊಳಗೆ ಇರಿಸಿದ. ಸ್ವಲ್ಪ ಸಮಯದ ನಂತರ ಇಂಥ ಸ್ಥಳದಲ್ಲಿ ಧರ್ಮಗ್ರಂಥವೊಂದು ಇರುವುದಾಗಿ ತನಗೆ ಕನಸು ಬಿತ್ತೆಂದ. ವಂದಿಮಾಗಧ, ಮಂತ್ರಿಗಳೊಡನೆ ಹೊರಟು ಆ ಸ್ಥಳದಲ್ಲಿ ಬೆದಕಿದರೆ, ಧರ್ಮಗ್ರಂಥ ಸಿಕ್ಕೇಬಿಟ್ಟಿತು. ಅದರಲ್ಲಿದ್ದುದೆಂದರೆ, 'ಜನನ–ಮರಣ ಚಕ್ರದಲ್ಲಿ ಯಾವುದು ತಾನೇ ಶಾಶ್ವತ. ಅಕಾಲಿಕ ದೇಹವನ್ನು ಇಟ್ಟುಕೊಂಡು ಏನು ತಾನೇ ಪ್ರಯೋಜನ? ಯುದ್ಧ ಮಾಡಿ ಸತ್ತರೆ ಮಾತ್ರ ಮೋಕ್ಷ. ಸ್ವರ್ಗದಲ್ಲಿ ದೇವಾಂಗನೆಯರ ಸಹವಾಸ. ಲೋಕದ ನಿತ್ಯಚೈತನ್ಯ ಬೀಜವಾದ ಸೂರ್ಯನನ್ನು ಭೇದಿಸಲು ಶಕ್ತರು ಇಬ್ಬರು ಮಾತ್ರ. ಒಬ್ಬ ವೀರ, ಇನ್ನೊಬ್ಬ ಯೋಗಿ. ಯೋಗ ಸಾಧನೆ ಕಷ್ಟ. ಅದರಿಂದ ಯುದ್ಧ ಮಾಡಿ ಸಾಯುವುದಕ್ಕೆ, ಸ್ವರ್ಗ ಅಥವಾ ಸೂರ್ಯಮಂಡಲ ಪ್ರಾಪ್ತಿಗೆ ಯಾರೂ ಹಿಂಜರಿಯಬಾರದು' ಎಂಬ ಮಾತುಗಳೆಲ್ಲ ಇದ್ದವು.

ರಾಜನು ಸಿಕ್ಕಿದ ಧರ್ಮಗ್ರಂಥದ ಸಾರವನ್ನು ರಾಜ್ಯದ ಮೇಲೆಲ್ಲ ಡಂಗುರ ಹೊಡೆಸಿ, ಯುವಕರನ್ನು ಯುದ್ಧಕ್ಕೆ ಪುಸಲಾಯಿಸಿದ. ಅದೇ ಸ್ಥಳದಲ್ಲಿ ಮತ್ತೆ ಮತ್ತೆ ಘೋರ ಯುದ್ಧವಾಯಿತು. ಅದೇ ಕುರುಕ್ಷೇತ್ರ ಎಂದು ಹುಯೆನ್‌ತ್ಸಾಂಗ್ ಪ್ರಸ್ತಾಪಿಸುತ್ತಾನೆ. ಪ್ರವಾಸಿಗೆ ಈ ಕತೆ ಕಣ್ಣಿಗೆ ಬಿದ್ದ ಬರಹವೋ, ಕಟ್ಟುಕಥೆಯೋ, ಕೇಳಿದ್ದನ್ನು ಬರೆದುಕೊಂಡನೋ ತಿಳಿಯುವುದಿಲ್ಲ. ಅಂತೂ ಮೇಲಿನ ದಂತಕಥೆಯನ್ನು ಪುರಸ್ಕರಿಸುವ ಕ್ರಮದಲ್ಲಿ ಯುದ್ಧವನ್ನು ಆರಾಧಿಸುವ ಶ್ಲೋಕಗಳು ಭಗವದ್ಗೀತೆಯಿಂದ ಮೊದಲುಗೊಂಡು ಕರ್ನಾಟಕದ ಅನೇಕ ಶಾಸನಗಳಲ್ಲಿ, ಕಾವ್ಯಗಳಲ್ಲಿ ನಿರಂತರವಾಗಿ ಪುನರಾವರ್ತನೆಗೊಂಡಿರುತ್ತವೆ.

★★★

ಒಂಬತ್ತು, ಹತ್ತನೇ ಶತಮಾನಗಳನ್ನು ಸಾಹಿತ್ಯ ಚರಿತ್ರೆಕಾರರು 'ವೀರಯುಗ'ವೆಂತಲೇ ಹೆಸರಿಸಿದ್ದಾರೆ. ಕರ್ನಾಟಕ ಮತ್ತು ತಮಿಳುನಾಡುಗಳ ನಡುವೆ ತೀವ್ರ ಘರ್ಷಣೆಯುಂಟಾಗುತ್ತಿದ್ದಂತೆಯೇ ಕರ್ನಾಟಕದ ಒಳಗಿನ ಬೇರೆ ಬೇರೆ ರಾಜವಂಶಸ್ಥರ ನಡುವೆ ಯುದ್ಧಗಳು ಜರುಗುತ್ತಿದ್ದವು. ಬೌದ್ಧ, ಜೈನಧರ್ಮಗಳು ತಮ್ಮ ಧರ್ಮದ ಬೀಜತತ್ತ್ವವೆನಿಸುವ ಅಹಿಂಸೆಯನ್ನು ಅದೆಷ್ಟೇ ಪುನರಾವರ್ತಿಸಿದರೂ ಶತಶತಮಾನಗಳಲ್ಲಿ ಯುದ್ಧ ಕುರುಕ್ಷೇತ್ರಗಳು ನಡೆದುಕೊಂಡೇ ಬಂದವು. ಯುದ್ಧವೇ ರಾಜಧರ್ಮವೆನ್ನುವಂತಾಯಿತು. ಆದರೆ, ಅದು ರಾಜಧರ್ಮವೇ ಎಂಬುದನ್ನು ಮಹಾಭಾರತ ಮತ್ತೆ ಮತ್ತೆ ಪ್ರಶ್ನಿಸುತ್ತದೆ. ಮಹಾಭಾರತ ಕಥನದ ಉದ್ದಕ್ಕೂ ಕುರುಕ್ಷೇತ್ರ ಯುದ್ಧವನ್ನು ತಡೆಯಲು ಧರ್ಮರಾಯ, ಕೃಷ್ಣ, ಭೀಷ್ಮ, ವಿದುರ, ಧೃತರಾಷ್ಟ್ರಾದಿಗಳಿಂದ ನಿರಂತರ ಪ್ರಯತ್ನ ನಡೆಯುತ್ತಲೇ ಇದ್ದಿತು ಎಂಬುದನ್ನು ಗಮನಿಸಬೇಕು. ಒಂಬತ್ತು, ಹತ್ತನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಿರಂತರ ಯುದ್ಧವು ನಡೆಯುತ್ತಿರುವಲ್ಲಿ ಅಹಿಂಸಾವ್ರತಿ ಕವಿಗಳಾದ ಪಂಪ, ರನ್ನರು ತಮ್ಮ ಕೃತಿಗಳಲ್ಲಿ ಯುದ್ಧ ವಿವರಗಳನ್ನು ನೀಡುತ್ತಲೇ ಸಮೂಹ ಮಾರಣ ಹೋಮ ಸಂಗತಿಯನ್ನು ಅದರ ವಿಷಾದವನ್ನು ಮತ್ತೆ ಮತ್ತೆ ನಿರೂಪಿಸಿದ್ದಾರೆ.

★★★